ಇ.ಎಸ್.ಐ. ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳು

937 (1377); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ಮಂಗಳೂರು ನಗರದಲ್ಲಿರುವ ಇ.ಎಸ್.ಐ. ಆಸ್ಪತ್ರೆಯಲ್ಲಿ ಮಂಜೂರಾದ ವಿವಿಧ ಹುದ್ದೆಗಳು ಯಾವುವು; ಈ ಪೈಕಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು;

ಆ) ವೈದ್ಯರ ಹುದ್ದೆ ಖಾಲಿ ಇರುವುದರಿಂದ ಕಾರ್ಮಿಕ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಖಾಲಿ ಇರುವ ವೈದ್ಯರ ಸ್ಥಾನಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಜರುಗಿಸಿದೆ;

ಈ) ಈ ಆಸ್ಪತ್ರೆಯನ್ನು ಕೇಂದ್ರ ಸರ್ಕಾರಕ್ಕೆ ವಹಿಸುವ ಪ್ರಸ್ತಾವನೆ ಇದೆಯೇ; ಇದ್ದಲ್ಲಿ, ಅದು ಯಾವ ಹಂತದಲ್ಲಿದೆ; ಯಾವಾಗ ಹಸ್ತಾಂತರಿಸಲಾಗುವುದು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಮಂಗಳೂರು ನಗರದಲ್ಲಿರುವ ಇ.ಎಸ್.ಐ. ಆಸ್ಪತ್ರೆಗೆ ಮಂಜೂರಾದ ಹುದ್ದೆಗಳ ವಿವರ ಮತ್ತು ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ ಕೆಳಕಂಡಂತಿದೆ:–

ಕ್ರ. ಸಂ.	ವೃಂದ	ಮಂಜೂರಾತಿ	ಭರ್ತಿ	ಖಾಲಿ
1.	ವೈದ್ಯಾಧಿಕಾರಿಗಳು	27	07	20
2.	ಉಪ ದಂತ ಶಸ್ತ್ರ ಚಿಕಿತ್ಸಕರು	01	0	01
3.	ಶುಶ್ರೂಷಕರು	37	34	03
4.	ಅರೆ ವೈದ್ಯಕೀಯ ಸಿಬ್ಬಂದಿ	18	06	12
5.	ಲಿಪಿಕ ವರ್ಗ	15	04	11
6.	ಗ್ರೂಪ್ 'ಡಿ'	50	21	29
	ಒಟ್ಟು	**148**	**72**	**76**

ಆ) –ಹೌದು–

ಇ) 1. ಕಾ.ರಾ.ವಿ. ಆಸ್ಪತ್ರೆ ಮಂಗಳೂರಿನ ತಜ್ಞ ವೈದ್ಯಾಧಿಕಾರಿಗಳ ಕೊರತೆ ನಿವಾರಿಸಲು 05 ತಜ್ಞ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ಹಾಗೂ 05 ಅಂಶಕಾಲಿಕ ತಜ್ಞ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ.

2. ಇಲಾಖೆಯಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ 150 ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಈ ಆಸ್ಪತ್ರೆಯನ್ನು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕಾ.ರಾ.ವಿ. ನಿಗಮದ ಸ್ವಾಧೀನಕ್ಕೆ ನೀಡಲು ದಿನಾಂಕ: 30.08.2014 ರಂದು ಕಾ.ರಾ.ವಿ. ನಿಗಮದ ಹಂತದಲ್ಲಿ ಬಾಕಿ ಇರುತ್ತದೆ. ಕಾ.ರಾವಿ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆ ಕಾ.ರಾ.ವಿ. ನಿಗಮದಿಂದ ಸಹಮತ ಸ್ವೀಕರಿಸಿದ ನಂತರ ಆಸ್ಪತ್ರೆಯನ್ನು ಹಸ್ತಾಂತರಿಸಲಾಗುವುದು.

ಸರ್ಕಾರಿ ಜಮೀನಿನ ಮಂಜೂರಾತಿ

938 (1520); ಶ್ರೀ ಎಂ.ಟಿ.ಬಿ. ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಹೋಬಳಿ ಗಿಡ್ಡಪ್ಪನ ಹಳ್ಳಿ ಗ್ರಾಮದ ಸ.ನಂ. 38 ರಲ್ಲಿರುವ ಸರ್ಕಾರಿ ಗೋಮಾಳದ ವಿಸ್ತೀರ್ಣವೆಷ್ಟು; ರೈತರುಗಳಿಗೆ ಮಂಜೂರಾಗಿರುವ ಹಾಗೂ ಉಳಿದ ವಿಸ್ತೀರ್ಣವೆಷ್ಟು; (ವಿವರ ನೀಡುವುದು)

ಆ) ಹಾಗಿದ್ದಲ್ಲಿ, ರೈತರು ಸರ್ಕಾರಕ್ಕೆ 1998 ರಲ್ಲಿ ಫಾರಂ 53 ರಲ್ಲಿ ಸಲ್ಲಿಸಿರುವ ಅರ್ಜಿಗಳೆಷ್ಟು; ವಿಲೇ ಮಾಡಿರುವ ಅರ್ಜಿಗಳೆಷ್ಟು, ವಿಲೇ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;